

# ಹಲವು ಕವಲುಗಳ ಹಾದಿ ಆಜಾದಿ

‘ಆಜಾದಿ’ ಎನ್ನುವ ಘೋಷಣೆ ಪಡೆದುಕೊಳ್ಳುತ್ತಿರುವ ರೂಪಾಂತರ ಕುತೂಹಲಕರವಾದುದು. ಸ್ವಾತಂತ್ರ್ಯದ ಹಂಬಲವಾಗಿ, ಪ್ರತಿಭಟನೆಗೆ ಸ್ಫೂರ್ತಿಯಾಗಿ, ಎದೆಯ ದನಿಯಾಗಿ – ಹೀಗೆ ಹಲವು ರೂಪಗಳಲ್ಲಿ ಸಾವಿರ ಸಾವಿರ ಕಂಠಗಳಲ್ಲಿ ಮೊಳಗುತ್ತಿರುವ ಈ ಘೋಷಣೆ ದಿನದಿಂದ ದಿನಕ್ಕೆ ಹೊಸ ಹೊಸ ಅರ್ಥಗಳನ್ನು ದಕ್ಕಿಸಿಕೊಳ್ಳುತ್ತಿದೆ.

■ ರಶ್ಮಿ ಕೆ.

ಪೌರತ್ವ ತಿದ್ದುಪಡಿ ಕಾಯ್ದೆ, ಎನ್‌ಆರ್‌ಸಿ, ಎನ್‌ಪಿಆರ್ ವಿರುದ್ಧ ನಡೆಯುತ್ತಿರುವ ಪ್ರತಿಭಟನೆಗಳಲ್ಲಿ ‘ಹಮ್ ಲೇಖೆ ರಹೇಂಗೇ ಆಜಾದಿ’ ಎಂದು ಕೂಗುತ್ತಾ ಕೈಯಲ್ಲಿ ತಿರಂಗಾ ಹಿಡಿದು ಜನ ಪ್ರತಿಭಟನೆ ನಡೆಸುತ್ತಿದ್ದಾರೆ. ಇತ್ತ ಉತ್ತರ ಪ್ರದೇಶದಲ್ಲಿ ಯೋಗಿ ಆದಿತ್ಯನಾಥರ ಸರ್ಕಾರ ‘ಆಜಾದಿ’ ಘೋಷಣೆ ಕೂಗುವವರ ವಿರುದ್ಧ ದೇಶದ್ರೋಹದ ಪ್ರಕರಣ ದಾಖಲಿಸುತ್ತೇವೆ ಎಂದು ಎಚ್ಚರಿಕೆ ನೀಡಿದೆ.

ಅಂದಹಾಗೆ, ಈ ಆಜಾದಿ ಕೂಗು ಇಂದಿನದೇನೂ ಅಲ್ಲ. ಇದರ ಕೂಗು ಮೊದಲು ಮೊಳಗಿದ್ದು 2016ರಲ್ಲಿ, ದೇಶದ ಪ್ರತಿಷ್ಠಿತ ಜವಾಹರ್‌ಲಾಲ್ ನೆಹರೂ ವಿಶ್ವವಿದ್ಯಾನಿಲಯದಲ್ಲಿ.

ಜೆಎನ್‌ಯು ವಿದ್ಯಾರ್ಥಿ ಸಂಘದ ಅಧ್ಯಕ್ಷ ಕನ್ಹಯ್ಯಾ ಕುಮಾರ್ ದೇಶದ್ರೋಹದ ಆರೋಪದಲ್ಲಿ ತಿಹಾರ್ ಜೈಲು ಸೇರಿದ್ದರು. 2016ರ ಮಾರ್ಚ್ 3ರಂದು ತಿಹಾರ್ ಜೈಲಿನಿಂದ ಬಿಡುಗಡೆಯಾದ ಅವರು, ಜೆಎನ್‌ಯು ಮತ್ತು ದೇಶವನ್ನುದ್ದೇಶಿಸಿ 50 ನಿಮಿಷಗಳ ಸುದೀರ್ಘ ಭಾಷಣ ಮಾಡಿದ್ದರು. ಆ ಭಾಷಣದಲ್ಲಿ ಬಿಜೆಪಿ ಮತ್ತು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ವಾಗ್ದಾಳಿ ನಡೆಸಿದ್ದ ಅವರು, ಭಾರತ ದೇಶದೊಳಗೆ ನಾವು ಸ್ವಾತಂತ್ರ್ಯ ಬೇಡುತ್ತಿದ್ದೇವೆ (ಆಜಾದ್ ದೇಶ್ ಮೇ ಆಜಾದಿ) ಎಂದು ಹೇಳಿದ್ದರು.

ವಿದ್ಯಾರ್ಥಿಗಳ ಜತೆ ಜೋಷ್‌ನಿಂದ ಲಾಲ್ ಸಲಾಂ ಘೋಷಣೆ ಕೂಗಿದ್ದ ಕನ್ಹಯ್ಯಾ ‘ಹಮ್ ಲೇಖೆ ರಹೇಂಗೆ’ ಎಂದು ಹೇಳಿದಾಗ ನೆರೆದಿದ್ದ ವಿದ್ಯಾರ್ಥಿ ಸಮೂಹ ಆಜಾದಿ ಎಂದು ದನಿಗೂಡಿಸಿತ್ತು. ನಂತರದ ಸಾಲುಗಳಲ್ಲಿ–

ಗರೀಬಿ ಸೇ ಆಜಾದಿ<br>
ಬುಖ್‌ಮಾರೀ ಸೇ ಆಜಾದಿ<br>
ಸಾಮಂತ್‌ವಾದ್ ಸೇ ಆಜಾದಿ<br>
ಪೂಂಜಿವಾದ್ ಸೇ ಆಜಾದಿ<br>
ಬ್ರಾಹ್ಮಣ್‌ವಾದ್ ಸೇ ಆಜಾದಿ<br>
ಜಾತಿವಾದ್ ಸೇ ಆಜಾದಿ<br>
ತೋ ಜೋರ್ ಸೇ ಬೋಲೊ ಆಜಾದಿ

ಎನ್ನುತ್ತಾ ಘೋಷಣೆ ಕೂಗಿದ್ದ ಕನ್ಹಯ್ಯಾ ಭರವಸೆಯ ನಾಯಕನಾಗಿ ಹೊರಹೊಮ್ಮಿದ್ದರು.

## ಆಜಾದಿ ಘೋಷಣೆ ಎಲ್ಲಿಂದ ಬಂತು?

ಕನ್ಹಯ್ಯಾ ಕುಮಾರ್ ಕೂಗಿದ ಆಜಾದಿ ಘೋಷಣೆ ಕಾಶ್ಮೀರದ ಪ್ರತ್ಯೇಕತಾವಾದಿಗಳ ಘೋಷಣೆಯಾಗಿತ್ತು ಎಂದು ಹೇಳುವವರೂ ಇದ್ದಾರೆ. ಆದರೆ ಭಾರತದಲ್ಲಿ ಆಜಾದಿ ಘೋಷಣೆ ಮೊಳಗಿಸಿದ್ದು ಖ್ಯಾತ ಸ್ತ್ರೀವಾದಿ ಚಿಂತಕಿ, ಹೋರಾಟಗಾರ್ತಿ ಕಮಲಾ ಬಾಸಿನ್. 1991ರಲ್ಲಿ ಕೋಲ್ಕತ್ತಾದ ಜಾಧವ್‌ಪುರ್ ವಿಶ್ವವಿದ್ಯಾಲಯದಲ್ಲಿ ನಡೆದ ಮಹಿಳಾ ಅಧ್ಯಯನ ಸಮಾವೇಶ (**Women’s Studies Conference**)ದಲ್ಲಿ ಕಮಲಾ ಬಾಸಿನ್ ಲವಲವಿಕೆಯಿಂದ ಆಜಾದಿ ಗೀತೆ ಹಾಡಿದ್ದರು. ಆಗ ಕಮಲಾ ಹಾಡಿದ ಆಜಾದಿ ಗೀತೆ ಹೀಗಿತ್ತು.

ಮೇರಿ ಬೆಹನೇ ಮಾಂಗೇ ಆಜಾದಿ<br>
ಮೇರಿ ಬಚ್ಚಿ ಮಾಂಗೇ ಆಜಾದಿ<br>
ನಾರೀ ಕಾ ನಾರಾ ಆಜಾದಿ<br>
(ನನ್ನ ಸಹೋದರಿಯರು ಕೇಳುತ್ತಿದ್ದಾರೆ ಸ್ವಾತಂತ್ರ್ಯ. ನನ್ನ ಮಕ್ಕಳು ಕೇಳುತ್ತಿದ್ದಾರೆ ಸ್ವಾತಂತ್ರ್ಯ. ಎಲ್ಲ ಮಹಿಳೆಯರ ಘೋಷಣೆ ಸ್ವಾತಂತ್ರ್ಯ).

ಕಮಲಾ ಅವರ ಘೋಷ ಪುರುಷ ಪ್ರಧಾನ ವ್ಯವಸ್ಥೆಯ ವಿರುದ್ಧದ ದನಿಯಾಗಿತ್ತು. ಮಹಿಳೆಯರ ಸಮಾನತೆಗಾಗಿ ಹೋರಾಡುತ್ತಿರುವ ಅವರು, 2013ರ ಫೆಬ್ರುವರಿ 14ರಂದು ದೆಹಲಿಯಲ್ಲಿ ನಡೆದ ‘ಒನ್ ಬಿಲಿಯನ್ ರೈಸಿಂಗ್ ಫ್ರಂ ಸೌತ್ ಏಷ್ಯಾ’ ಕಾರ್ಯಕ್ರಮದಲ್ಲಿ ವ್ಹೀಲ್ ಚೇರ್‌ನಲ್ಲಿ ಕುಳಿತು ಆಜಾದಿ ಗೀತೆ ಹಾಡಿದ್ದರು. ಆಗ ಅವರು ಹಾಡಿನ ಸಾಲುಗಳಲ್ಲಿ ಮಜ್ದೂರ್ ಕಾ ನಾರಾ (ಕಾರ್ಮಿಕರ ಘೋಷಣೆ), ದಲಿತೋಂಕಾ ನಾರಾ (ದಲಿತರ ಘೋಷಣೆ) **From patriarchy: Azadi, from all the hierarchy: Azadi; from endless violence: Azadi; from helpless silence: Azadi** ಎಂದು ಬದಲಾವಣೆ ಮಾಡಿದ್ದರು.

1985ರಲ್ಲಿ ಪಾಕಿಸ್ತಾನದಲ್ಲಿ ನಡೆದ ಮಹಿಳೆಯರ ಸಮ್ಮೇಳನದಲ್ಲಿ ‘ಮೇರಿ ಬೆಹನೇ ಮಾಂಗೇ ಆಜಾದಿ’ ಎಂಬ ಸಾಲಿನಿಂದ ತಾನು ಹಾಡಿದ ಸ್ಫೂರ್ತಿ ಪಡೆದೆ ಎಂದು ಸಂದರ್ಶನವೊಂದರಲ್ಲಿ ಕಮಲಾ ಹೇಳಿದ್ದಾರೆ. ಪ್ರತಿಭಟನೆಯ ಸಂದರ್ಭಕ್ಕೆ ತಕ್ಕಂತೆ, ಅನ್ಯಾಯದ ವಿರುದ್ಧ ಘೋಷಣೆ ಕೂಗುವಾಗ ಆಜಾದಿ ಗೀತೆಯ ಸಾಲುಗಳು ಬದಲಾಗುತ್ತವೆ. ಕಳೆದ ವರ್ಷ ಸುದ್ದಿಮಾಧ್ಯಮವೊಂದಕ್ಕೆ ನೀಡಿದ ಸಂದರ್ಶನದಲ್ಲಿ ಆಜಾದಿ ಘೋಷಣೆಯ ಬಗ್ಗೆ ಮಾತನಾಡಿದ್ದ ಅವರು, ‘ಆಜಾದಿ ಘೋಷಣೆಯ ಚಮತ್ಕಾರವೇ ಇದು. ಅದು ಕಲ್ಲಿನಂತೆ ಸ್ಥಿರವಾಗಿ ಉಳಿದುಕೊಂಡಿಲ್ಲ, ಪ್ರತಿ ದಿನವೂ ಅದು ಬೆಳೆಯುತ್ತಲೇ ಹೋಗುತ್ತದೆ’ ಎಂದಿದ್ದರು.

## ಆಜಾದಿ ಜನಪ್ರಿಯತೆ

ಕನ್ಹಯ್ಯಾ ಕುಮಾರ್‌ನ ಆಜಾದಿ ಘೋಷಣೆ ದೇಶದಲ್ಲಿ ಸದ್ದು ಮಾಡುತ್ತಿದ್ದಾಗ ದೆಹಲಿಯ